KADK010043832021

# **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು.**

## **ಸ್ಪೆಷಲ್ ಕೇಸ್ ನಂಬ್ರ: 184/2021**

| | | |
|---|---|---|
| ಆರೋಪಿಯ ಹೆಸರು | : | ಮೊಹಮ್ಮದ್ ಶೇಖ್ ಅಫ್ರೀದ್ @ ಅಪ್ಪಿ |
| ತಂದೆಯ ಹೆಸರು | : | ಸಿರಾಜ್ |
| ವಯಸ್ಸು | : | 26 ವರ್ಷ |
| ವಾಸಸ್ಥಳ | | ಫ್ಲ್ಯಾಟ್ ನಂಬ್ರ 201,<br>ಮಾರ್ವರ್ ಅಪಾರ್ಟಮೆಂಟ್<br>ಶ್ರೀನಿವಾಸ ಕಾಲೇಜಿನ ಹತ್ತಿರ,<br>ಮೋರ್ ಸೂಪರ್ ಮಾರ್ಕೆಟ್ ರೈಲ್ವೇ<br>ಗೇಟ್ ಹತ್ತಿರ, ಪಾಂಡೇಶ್ವರ,<br>ಮಂಗಳೂರು ತಾಲೂಕು. |

## **ಭಾರತ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆ**

ಪ್ರ.ನಂ: 1 ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ನ್ಯಾಯಾಲಯದಲ್ಲಿ ಮಾಡಿದ ಸಾಕ್ಷಿಗಳ ವಿಚಾರಣೆಯನ್ನು ಕೇಳಿದ್ದೀರಾ?

ಉತ್ತರ: ಕೇಳಿದ್ದೇನೆ

ಪ್ರ.ನಂ: 2 ಫ್ರಾಸಾ-1- ಜಗನ್ನಾಥ್ ಕೆ., ಪಿಎಸ್ಐ, ಟ್ರಾಫಿಕ್ ಪಶ್ಚಿಮ ಠಾಣೆ, ಮಂಗಳೂರು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ: 07.09.2020 ರಂದು ಮಧ್ಯಾಹ್ನ 2.00 ಗಂಟೆಗೆ ತಾನು ಠಾಣಾ ವ್ಯಾಪ್ತಿಯಲ್ಲಿ ರೌಂಡ್ಸ್ ಕರ್ತವ್ಯದಲ್ಲಿದ್ದಾಗ ಬಾತ್ಮಿದಾರರು ಕರೆ ಮಾಡಿ ತೊಕ್ಕೊಟ್ಟುನಿಂದ ಆರೋಪಿಯಾದ ನೀವು ಕದ್ರಿ ಶಿವಭಾಗ್ ಎಂಬಲ್ಲಿಗೆ ಮಧ್ಯಾಹ್ನ 4.00 ಗಂಟೆಗೆ ಗಾಂಜಾ ಮಾರಾಟ ಮಾಡಲು ನೀಲಿ ಬಣ್ಣದ ಸ್ಕೂಟರ್ ನಲ್ಲಿ(ಕೆಎ–19–ಇಝುಡ್–2912) ಬರುತ್ತಿರುವುದಾಗಿ ಮಾಹಿತಿಯನ್ನು

ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 3 ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಾನು ಈ ಮಾಹಿತಿಯನ್ನು ಚಾಸಾ.18–ಪೊಲೀಸ್ ಇನ್ಸಪೆಕ್ಟರ್ ಇವರಿಗೆ ತಿಳಿಸಿದ್ದು, ಕೂಡಲೇ ಠಾಣೆಗೆ ಬಂದು ಪಿರ್ಯಾದಿ ತಯಾರಿಸಿ ಪ್ರಕರಣ ದಾಖಲಿಸಲು ಚಾಸಾ–17 ಇವರಿಗೆ ನೀಡಿದ್ದು, ಸದರಿ ದೂರನ್ನು ನಿಪಿ–1 ಎಂದು ಅದರಲ್ಲಿ ತನ್ನ ಸಹಿ ನಿಪಿ–1(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ4 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ತನಿಖಾಧಿಕಾರಿ ಜೊತೆಗೆ ಕದ್ರಿ ಶಿವಭಾಗ್ 5 ನೇ ಕ್ರಾಸಿನ ಸ್ಪಾಟ್ ಗೆ ಹೋಗಿದ್ದು, ಠಾಣಾ ಸಿಬ್ಬಂದಿಗಳು, ಪಂಚರು, ಪತ್ರಾಂಕಿತ ಅಧಿಕಾರಿ ಇದ್ದು, ಅಲ್ಲಿ ವಾಚ್ ಮಾಡುತ್ತಿದ್ದಾಗ ಶಿವಭಾಗ್ ಕಡೆಯಿಂದ ಮೇಲೆ ಹೇಳಿದ ನೀಲಿ ಬಣ್ಣದ ಸ್ಕೂಟರ್ ನಲ್ಲಿ ಬರುತ್ತಿದ್ದ ಆರೋಪಿಯಾದ ನಿಮ್ಮನ್ನು ಕಂಡು ನಿಲ್ಲಿಸಲು ಸೂಚನೆ ಕೊಟ್ಟಾಗ ತಮ್ಮನ್ನು ನೋಡಿ ಸ್ಕೂಟರಿನಲ್ಲಿ ಹೋಗಲು ಪ್ರಯತ್ನಿಸಿ ಬಿದ್ದಿದ್ದು, ಬಿದ್ದ ನಿಮ್ಮನ್ನು ಪಿಸಿ 2232 ಓಡಿ ಹೋಗಿ ಹಿಡಿದುಕೊಂಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 5 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ತಾವೆಲ್ಲರೂ ಸುತ್ತುವರೆದು ಪತ್ರಾಂಕಿತ ಅಧಿಕಾರಿಯವರು ಆರೋಪಿಯಾದ ನಿಮ್ಮನ್ನು ವಿಚಾರಿಸಿದಾಗ ಆರೋಪಿಯಾದ ನಿಮ್ಮ ಸ್ಕೂಟರಿನ ಫೂಟ್‌ರೆಸ್ಟ್ ನಲ್ಲಿ ಪಾಲಿಥೀನ್ ಚೀಲದಲ್ಲಿ ಟೇಪ್ ಸುತ್ತಿದ ಕಟ್ಟು ಇದ್ದು, ಅದರಲ್ಲಿ ಗಾಂಜಾ ಇರುವುದಾಗಿ ಹೇಳಿದ್ದು, ಆರೋಪಿಯಾದ ನಿಮ್ಮ ಅಂಗಶೋಧನೆ ಮಾಡಲು ಒಪ್ಪಿಕೊಂಡಿದ್ದು, ಆ ಕಟ್ಟನ್ನು ತೆಗೆದು ತೋರಿಸಿದ್ದು ಅದರಲ್ಲಿ

2.200 ಕೆಜಿ ಗಾಂಜಾ ಇರುವುದು ದೃಢಪಟ್ಟಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 6 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸ್ಕೂಟರ್, ಆರೋಪಿಯಾದ ನಿಮ್ಮಲ್ಲಿದ್ದ ಮೊಬೈಲ್, ಪಾಲಿಥೀನ್ ಬ್ಯಾಗ್, ಗಾಂಜಾ ಇವುಗಳನ್ನು ನಿಪಿ–2 ರಂತೆ ಮಹಜರು ಮೂಲಕ ಸ್ವಾಧೀನಪಡಿಸಿಕೊಂಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–2(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ7 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನಿಮ್ಮೊಂದಿಗೆ ಎಲ್ಲರೂ ಠಾಣೆಗೆ ಬಂದಿದ್ದು, ಅಲ್ಲಿ ವಶಪಡಿಸಿಕೊಂಡ ಮೊಬೈಲ್, ಪಾಲಿಥೀನ್ ಚೀಲವನ್ನು ಮುಮಾ–1 ಮತ್ತು ಮುಮಾ–2 ಎಂದು ಗುರುತಿಸಿದ್ದು ಹಾಗೂ ಫೋಟೋದಲ್ಲಿ ಕಾಣುವ ಸ್ಕೂಟರನ್ನು ಅಲ್ಲಿ ವಶಪಡಿಸಿಕೊಂಡಿದ್ದು, ಸದರಿ ಫೋಟೋವನ್ನು ಸಿಡಿ ಸಮೇತ ನಿಪಿ–3 ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ8 ಫ್ರಾಸಾ-2ಶ್ರೀ ಮಹೇಶ್ ಎಸ್, ಪೊಲೀಸ್ ಪೇದೆ, ಸಂಚಾರ ಪೂರ್ವ ಪೊಲೀಸ್ ಠಾಣೆ, ಮಂಗಳೂರು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ12.11.2020 ರಂದು ಈ ಪ್ರಕರಣದ ಸ್ವತ್ತುಗಳನ್ನು ಪೊಲೀಸ್ ಇನ್ಸಪೆಕ್ಟರ್ ಇವರ ಆದೇಶದಂತೆ ಬೆಂಗಳೂರು FSL ಗೆ ಹೋಗಿ ಅಲ್ಲಿ ಅದನ್ನು ನೀಡಿ ಸ್ವೀಕೃತಿ ಪಡೆದು ತಂದು ಇನ್ಸಪೆಕ್ಟರ್ ಗೆ ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ9 ಫ್ರಾಸಾ-2 ರವರು ಮುಂದುವರೆದು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ13.11.2020 ರಂದು ಈ ಸ್ವತ್ತುಗಳನ್ನು FSL ಬೆಂಗಳೂರಿಗೆ

ನೀಡಿ ದಿನಾಂಕಃ15.11.2020 ರಂದು ಆ ಬಗ್ಗೆ ತನಿಖಾಧಿಕಾರಿಗೆ ಸ್ವೀಕೃತಿಯನ್ನು ನೀಡಿ ವರದಿ ಮಾಡಿದ್ದು, ತನಗೆ ಕೊಟ್ಟ ರಹದಾರಿ ಪತ್ರವನ್ನು ನಿಪಿ–24 ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 10 ಫ್ರಾಸಾ-3 ಶ್ರೀ ದಿನೇಶ್ ಎಂ., ಪೊಲೀಸ್ ಮುಖ್ಯ ಪೇದೆ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ07.09.2020 ರಂದು ಈ ಪ್ರಕರಣಕ್ಕೆ ಸಂಬಂಧಿಸಿದ ಪ್ರಥಮ ವರ್ತಮಾನ ವರದಿಯನ್ನು ಸಾಯಂಕಾಲ 5.00 ಗಂಟೆಗೆ ನ್ಯಾಯಾಲಯದ ಕಚೇರಿಗೆ ತಂದು ಕೊಟ್ಟಿದ್ದು, ಆ ಸಮಯದಲ್ಲಿ ಕೋವಿಡ್ ಇದ್ದುದರಿಂದ ನಿಪಿ–4 ರಂತೆ ಪ್ರಥಮ ವರ್ತಮಾನ ವರದಿಯನ್ನು ಕಚೇರಿಯಲ್ಲಿ ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ11 ಫ್ರಾಸಾ–4 ಸುಶಾನ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ನಿಪಿ–2 ರ ಮೇಲಿರುವ ನಿಪಿ–2(ಬಿ) ಮತ್ತು ನಿಪಿ–5 ರ ಮೇಲಿರುವ ನಿಪಿ–5(ಎ) ಸಹಿಗಳು ತಮ್ಮದು ಇರುತ್ತವೆಯೆಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ12 ಫ್ರಾಸಾ–5 ಶ್ರೀ ಅರುಣ್ ವಿ.ಎಸ್., ಹಿರಿಯ ವೈಜ್ಞಾನಿಕ ಅಧಿಕಾರಿ RFSL, ಮಂಗಳೂರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 13.11.2020 ರಂದು DFSL ಬೆಂಗಳೂರಿನಲ್ಲಿ ಪಿಸಿ 851 ಮಹೇಶ್ ಇವರ ಮುಖಾಂತರ ಸ್ವೀಕರಿಸಿದ್ದು, ತದ ನಂತರ 20.04.2021 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ RFSL ಮಂಗಳೂರಿಗೆ ಸ್ವತ್ತುಗಳನ್ನು ವರ್ಗಾಯಿಸಲಾಗಿದ್ದು, ದಿನಾಂಕಃ 05.05.2021 ರಂದು ಪೊಲೀಸ್ ಐಟಿಯಲ್ಲಿ ಎಂಟ್ರಿ ಮಾಡಲಾಗಿದ್ದು,

ಅದಕ್ಕೆ RFSL ಕ್ರಮ ಸಂಖ್ಯೆ CS 101/2021 ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ13 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದಲ್ಲಿನ ಸ್ವತ್ತನ್ನು one sealed cloth packet, I.O. marked as B, ಈ ಸ್ವತ್ತನ್ನು ಪರಿಶೀಲಿಸಲಾಗಿ ಅದರೆ ಮೇಲೆ JMFC VI Court ಅರಗು ಸೀಲು ಇದ್ದು, ನಂತರ ಪೇಪರ್ ಸ್ಲಿಪ್, Magistrate signature ಹಾಗೂ ಸೀಲು ಸುಸ್ಥಿತಿಯಲ್ಲಿದ್ದು, ಅದು intact and tallied with the sample seals ಮತ್ತು Article ಅನ್ನು ಓಪನ್ ಮಾಡಿ ನೋಡಲಾಗಿ dried broken small stalks bearing greenish brown color small leaves with fruiting and flowering tops, seeds, broken small sticks and stalks having characteristic smell ಮತ್ತು Initially, the weight of the article was 49.86 gram ಇದ್ದು, ಈ ಸ್ವತ್ತನ್ನು micro scoping examination ಗೆ ಒಳಪಡಿಸಿದಾಗ cistoligic hairs are observed, fruiting and flowering tops are found ಮತ್ತು Duquenois, para amyno test are found positive for cannabis in article B. TLC method positive for cannabinis in article B. UV spectrophotometric analysis for tetrohydrocanabinal lambda maximum was 277 nano metre ಇತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ14 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ Qualitative test method, UV spectrophotometric and chin layer chromatographic methods have responded for the presence of cannabis (ganja) in article B ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ15 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ After examination of this article, the weight of the article B 46.71 gram was returned to the concerned I.O. with proper seal and signature ಇರುತ್ತದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ16 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈಗ ತೋರಿಸಿದ ವರದಿ ಮತ್ತು ಸ್ಯಾಂಪಲ್ ಸೀಲನ್ನು ತಾನು ನೀಡಿದ್ದು, ಸದರಿ ವರದಿಯನ್ನು ನಿಪಿ–7 ಎಂದು, ಅದರಲ್ಲಿ ತನ್ನ ಸಹಿ ಪಿ–7(ಎ) ಎಂದು, ಸ್ಯಾಂಪಲ್ ಸೀಲನ್ನು ನಿಪಿ–8 ಎಂದು, ಅದರಲ್ಲಿ ತನ್ನ ಸಹಿ ಪಿ–8(ಎ) ಎಂದು, ಸದರಿ ಪ್ಯಾಕೆಟ್ ಮೇಲಿರುವ ಚೀಟಿಯನ್ನು ನಿಪಿ–9 ಎಂದು, ತನ್ನ ಸಹಿ ನಿಪಿ–9(ಎ) ಯಂತೆ ಇರುತ್ತವೆಂದು, ಸೀಲ್ ಇರುವ ಪ್ಯಾಕೆಟನ್ನು ತೆರೆದು ನೋಡಲಾಗಿ ಅದರಲ್ಲಿ ತಾನು ಪರೀಕ್ಷಿಸಿದ ವಸ್ತು ಇದ್ದು, ಸದರಿ ವಸ್ತುವನ್ನು ಮುಮಾ–3 ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ17 ಪ್ರಾಸಾ-6 ಶ್ರೀ ರಾಘವೇಂದ್ರ, ಪೊಲೀಸ್ ಪೇದೆ, ಕಂಕನಾಡಿ ನಗರ ಪೊಲೀಸ್ ಠಾಣೆ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 07.09.2020 ರಂದು ಮಧ್ಯಾಹ್ನ 3.15 ಗಂಟೆಗೆ ಇನ್ಸಪೆಕ್ಟರ್ ತನ್ನನ್ನು, ಪಿಎಸ್ಐ ಹಾಗೂ

ಇತರ ಸಿಬ್ಬಂದಿಗಳನ್ನು ಕರೆದು ಮಂಗಳೂರು ತೊಕ್ಕೊಟ್ಟು ಕಡೆಯಿಂದ ಶಿವಭಾಗ್ ಕಡೆಗೆ ಒಂದು ಕಪ್ಪು ಬಣ್ಣದ ಸ್ಕೂಟರ್ ನಲ್ಲಿ ಗಾಂಜಾ ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಆ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಯವರನ್ನು ಠಾಣೆಗೆ ಕರೆಯಿಸಿಕೊಂಡು ಅವರ ಸಮಕ್ಷಮದಲ್ಲಿ 03.15 ರಿಂದ 03.30 ಗಂಟೆಯವರೆಗೆ ನಿಪಿ–10 ರಂತೆ ಅಂಗಶೋಧನೆ ಮಹಜರ್ ನಡೆಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–10(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 18 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಠಾಣೆಯಿಂದ ಸ್ಥಳಕ್ಕೆ ತೆರಳಲು ಪೊಲೀಸ್ ಇನ್ಸಪೆಕ್ಟರ್ ಕೆಎ–19–ಜಿ–0387, ಕೆಎ–19–ಜಿ–0757 ವಾಹನದಲ್ಲಿ ತನಿಖಾ ಸಲಕರಣೆಗಳನ್ನು ಹಾಗೂ ತೂಕ ಮಾಪನವನ್ನು ತೆಗೆದುಕೊಂಡು ಮಾಹಿತಿ ಬಂದ ಸ್ಥಳವಾದ ಶಿವಭಾಗ್‌ನ 5 ನೇ ಕ್ರಾಸಿಗೆ 3.50 ಗಂಟೆಗೆ ತಲುಪಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 19 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮಾಹಿತಿ ಬಂದ ಸ್ಕೂಟರ್ ಗೆ ಕಾಯುತ್ತಿರುವ ಸಮಯ 04.05 ಗಂಟೆಗೆ ಕೆಎ–19–ಇಝಡ್–2912 ಸಂಖ್ಯೆಯ ಸ್ಕೂಟರ್ ಬರುತ್ತಿರುವುದನ್ನು ಪೊಲೀಸ್ ಇನ್ಸಪೆಕ್ಟರ್ ನೋಡಿ ಅದನ್ನು ನಿಲ್ಲಿಸುವಂತೆ ಸೂಚನೆ ನೀಡಿದ್ದು, ಅದರಂತೆ ಸಮವಸ್ತ್ರದಲ್ಲಿದ್ದ ತಾವು ಸ್ಕೂಟರ್ ನಿಲ್ಲಿಸುವಂತೆ ಸೂಚಿಸಿದಾಗ ಆರೋಪಿಯಾದ ನೀವು ಸ್ಕೂಟರನ್ನು ನಿಲ್ಲಿಸದೇ ಪರಾರಿಯಾಗಲು ಪ್ರಯತ್ನಿಸಿದಾಗ ಆಯ ತಪ್ಪಿ ಸ್ಕೂಟರ್ ನಿಂದ ಕೆಳಗೆ ಬಿದ್ದು ಸ್ಕೂಟರ್ ನ ಕಾಲು ಇಡುವ ಸ್ಥಳದಲ್ಲಿದ್ದ ಪಾಲಿಥೀನ್ ಚೀಲವನ್ನು ಹಿಡಿದುಕೊಂಡು ಓಡಿ ಹೋಗಲು ಪ್ರಯತ್ನಿಸಿದ ನಿಮ್ಮನ್ನು ಬೆನ್ನಟ್ಟಿ ಹಿಡಿದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 20 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಇನ್ಸಪೆಕ್ಟರ್ ಹಾಗೂ ಸಿಬ್ಬಂದಿಗಳು ಆರೋಪಿಯಾದ ನಿಮ್ಮನ್ನು ವಶಕ್ಕೆ ಪಡೆದು ಕೂಲಂಕುಷವಾಗಿ ವಿಚಾರಣೆ ಮಾಡಿದಾಗ, ಆರೋಪಿಯಾದ ನೀವು ತನ್ನ ಹೆಸರು ಮೊಹಮ್ಮದ್ ಶೇಖ್ ಅಫ್ರೀದ್ ಎಂದು ತಿಳಿಸಿದ್ದು, ನಿಮ್ಮ ಕೈಯಲ್ಲಿದ್ದ ಪಾಲಿಥೀನ್ ಚೀಲದ ಬಗ್ಗೆ ವಿಚಾರಣೆ ಮಾಡಿದಾಗ ಆರೋಪಿಯಾದ ನೀವು ಅಸಮರ್ಪಕವಾಗಿ ಉತ್ತರ ನೀಡಿದ್ದು, ನಂತರ ಆ ಚೀಲದಲ್ಲಿ ಗಾಂಜಾದ ಕಟ್ಟು ಇರುವುದಾಗಿ ತಿಳಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 21 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಇನ್ಸಪೆಕ್ಟರ್ ಆರೋಪಿಯಾದ ನಿಮ್ಮ ಅಂಗಶೋಧನೆಯನ್ನು ಪತ್ರಾಂಕಿತ ಅಧಿಕಾರಿ ಮಾಡಬೇಕೇ ಅಥವಾ ತಾನೇ ಮಾಡಬೇಕೇ ಎಂದು ಕೇಳಿದ್ದು, ಆ ಸಮಯದಲ್ಲಿ ಆರೋಪಿಯಾದ ನೀವು ಪತ್ರಾಂಕಿತ ಅಧಿಕಾರಿ ಮಾಡಬೇಕೆಂದು ತಿಳಿಸಿದ್ದು, ಸ್ಥಳದಲ್ಲಿ ಇದ್ದ ಪತ್ರಾಂಕಿತ ಅಧಿಕಾರಿ ಜಗದೀಶ್ ಇವರು ಗುರುತಿನ ಚೀಟಿ ತೋರಿಸಿ ತಾನು ಪತ್ರಾಂಕಿತ ಅಧಿಕಾರಿ ಎಂದು ತಿಳಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 22 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನಿಮ್ಮ ಕೈಯಲ್ಲಿದ್ದ ಪಾಲಿಥೀನ್ ಚೀಲದ ಬ್ಯಾಗ್ ವಿಚಾರಣೆ ಮಾಡಿದಾಗ ಅದರಲ್ಲಿ ಒಂದು ಗಾಂಜಾ ಕಟ್ಟು ಇರುವುದಾಗಿ ತಿಳಿಸಿ, ಅದನ್ನು ಹಾಜರು ಪಡಿಸಿದ್ದು, ಅದನ್ನು ಇನ್ಸಪೆಕ್ಟರ್ ಮತ್ತು ಪತ್ರಾಂಕಿತ ಅಧಿಕಾರಿ ನೋಡಿದಾಗ ಅದು ಕಾಕಿ ಬಣ್ಣದ ಟೇಪ್ ನಿಂದ ಸುತ್ತಿದ್ದು, ಅದನ್ನು ತೆರೆದು ನೋಡಿದಾಗ ಅದರಲ್ಲಿ ಗಾಂಜಾದ ಎಲೆ, ಬೀಜ ಇದ್ದು, ಅದನ್ನು ಪತ್ರಾಂಕಿತ ಅಧಿಕಾರಿ ಹಾಗೂ ಪಂಚರ ಸಮಕ್ಷಮದಲ್ಲಿ ಠಾಣೆಯಿಂದ ತಂದಿದ್ದ ತೂಕ ಮಾಪನದಲ್ಲಿ ತೂಕ ಮಾಡಿದ್ದು ಅದು 2.200 ಕೆಜಿ ಗಾಂಜಾ ಇದ್ದು, ಅದನ್ನು ಸ್ಥಳದಲ್ಲಿ ಬಿಳಿ

ಬಟ್ಟೆಯಿಂದ ಹೊಲಿದು, ಪ್ಯಾಕ್ ಮಾಡಿ, E ಎಂಬ ಅರಗು ಸೀಲ್ ಹಾಕಿ ಪತ್ರಾಂಕಿತ ಅಧಿಕಾರಿ, ಇನ್ಸಪೆಕ್ಟರ್ ಹಾಗೂ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿ A ಎಂದು ಗುರುತು ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 23 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹಳದಿ ಬಣ್ಣದ ಪಾಲಿಥೀನ್ ಚೀಲ ಹಾಗೂ ಆರೋಪಿಯಾದ ನಿಮ್ಮಲ್ಲಿದ್ದ ಕಪ್ಪು ಬಣ್ಣದ ವಿವೊ ಮೊಬೈಲ್ ಫೋನನ್ನು ಸ್ವಾಧೀನಪಡಿಸಿಕೊಂಡಿದ್ದು, ಮಾದಕ ವಸ್ತು ಸಾಗಾಟ ಮಾಡಲು ಉಪಯೋಗಿಸಿದ ಕೆಎ–19–ಇಝಡ್–2912 ಕಪ್ಪು ಬಣ್ಣದ ಸ್ಕೂಟರನ್ನು ಸ್ವಾಧೀನಪಡಿಸಿಕೊಂಡಿದ್ದು, ಈ ಬಗ್ಗೆ ಸ್ಥಳದಲ್ಲಿ ಪೊಲೀಸ್ ಇನ್ಸಪೆಕ್ಟರ್ ಸವಿತ್ರ ತೇಜ ಇವರ ಉಕ್ತಲೇಖನದಂತೆ ತಾನು ನಿಪಿ–2 ಮಹಜರನ್ನು ಬರೆದಿದ್ದು, ಅದರಲ್ಲಿ ತನ್ನ ಸಹಿ ನಿಪಿ–2(ಸಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 24 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮಹಜರು ಮಾಡಿದ ನಂತರ ಆರೋಪಿಯಾದ ನಿಮ್ಮನ್ನು ಠಾಣೆಗೆ ಕರೆದುಕೊಂಡು ಬಂದಿದ್ದು, ನಿಮ್ಮ ಫೋಟೋ ಮತ್ತು ಸ್ಕೂಟರಿನ ಫೋಟೋ ತೆಗೆದು ಪ್ರಿಂಟ್ ಮಾಡಿ ಸಿಡಿಯಲ್ಲಿ ಹಾಕಿ ಕೊಡುವಂತೆ ಹೇಳಿದ್ದು, ತಾನು ಫೋಟೋ ತೆಗೆದು ಪ್ರಿಂಟ್ ಮಾಡಿ ಸಿಡಿಯಲ್ಲಿ ಹಾಕಿ ಇನ್ಸಪೆಕ್ಟರ್ ಸವಿತ್ರ ತೇಜ್ ಇವರಿಗೆ ಕೊಟ್ಟಿದ್ದು, ಈ ಬಗ್ಗೆ ಕಲಂ 65 ಬಿ ಸರ್ಟಿಫಿಕೇಟನ್ನು ನಿಪಿ–11 ರಂತೆ ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–11(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 25 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 07.11.2020 ರಂದು 6 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದ ಮುಂದೆ ಇನ್ವೆಂಟರಿ ಮಾಡುವ ಸಮಯ ಇನ್ಸಪೆಕ್ಟರ್ ಹೇಳಿದಂತೆ ಠಾಣೆಯ Sony Cybershot ಕ್ಯಾಮೆರಾದಲ್ಲಿ ಫೋಟೋ ತೆಗೆದಿದ್ದು, ಅದನ್ನು ಪ್ರಿಂಟ್ ಮಾಡಿ ಸಿಡಿಗೆ ಹಾಕಿ ಇನ್ಸಪೆಕ್ಟರ್ ಮುಂದೆ ಹಾಜರು ಪಡಿಸಿದ್ದು, ಈ ಬಗ್ಗೆ ಕಲಂ 65 ಬಿ ಸರ್ಟಿಫಿಕೇಟನ್ನು ನಿಪಿ–12 ರಂತೆ ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–12(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 26 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮುಮಾ–3–ಗಾಂಜಾ ಪ್ಯಾಕೆಟನ್ನು ಇನ್ವೆಂಟರಿ ಸಮಯದಲ್ಲಿ ನೋಡಿದ್ದು, ಮುಮಾ–2 ಪಾಲಿಥೀನ್ ಚೀಲವನ್ನು ಆ ದಿನ ನೋಡಿದ್ದು, ಸೀಲ್ ಮಾಡಿದ ಪ್ಯಾಕೆಟ್ಟನ್ನು ನೋಡಿ ಅದರಲ್ಲಿ ಕಪ್ಪು ಬಣ್ಣದ ವಿವೊ ಮೊಬೈಲ್ ಇದ್ದು, ಸದರಿ ಮೊಬೈಲನ್ನು ಈಗಾಗಲೇ ಮುಮಾ–1 ಎಂದು ಗುರುತಿಸಿದ್ದು, ನಿಪಿ–3 ಫೋಟೋ ದಲ್ಲಿ ಕಾಣುವ ವಾಹನವನ್ನು ವಶಪಡಿಸಿಕೊಂಡಿದ್ದು, ನ್ಯಾಯಾಲಯದಲ್ಲಿರುವ ಆರೋಪಿಯಾದ ನಿಮ್ಮನ್ನು ತಾನು ಅಲ್ಲಿ ನೋಡಿರುವುದಾಗಿ ನುಡಿದಿರುತ್ತಾರೆ.ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 27 ಫ್ರಾಸಾ-7 ಶ್ರೀ ಎಂ. ಜಗದೀಶ್, Addl. S.P., ಕಾರವಾರ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 07.09.2020 ರಂದು ಮಧ್ಯಾಹ್ನ 2.45 ಗಂಟೆಗೆ ಪೂರ್ವ ಠಾಣೆಯ ಇನ್ಸಪೆಕ್ಟರ್ ಸವಿತ್ರ ತೇಜ್ ಇವರು ದೂರವಾಣಿಯಲ್ಲಿ ಮಾಹಿತಿ ನೀಡಿ ಆರೋಪಿಯಾದ ನೀವು ಗಾಂಜಾ ಸಾಗಾಟ ಮಾಡುತ್ತಿದ್ದು, ಆರೋಪಿಯಾದ ನಿಮ್ಮ ದಸ್ತಗಿರಿ ಕ್ರಮ ಜರುಗಿಸಿ ಅಂಗಶೋಧನೆ ಮಾಡಲು ಪತ್ರಾಂಕಿತ ಅಧಿಕಾರಿಯಾಗಿ ಬರಬೇಕೆಂದು ಕೋರಿಕೊಂಡಿದ್ದು, ತಾನು 3.00 ಗಂಟೆಗೆ ಪೂರ್ವ ಠಾಣೆಗೆ ಹೋಗಿದ್ದು ಅಲ್ಲಿ ಇನ್ಸಪೆಕ್ಟರ್, ಪಂಚರು ಹಾಗೂ ಸಿಬ್ಬಂದಿಗಳು ಹಾಜರಿದ್ದರು ಎಂದು ನುಡಿದಿರುತ್ತಾರೆ. ಈ

ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 28 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಇನ್ಸಪೆಕ್ಟರ್ ದಾಳಿ ಮಾಡುವ ಬಗ್ಗೆ ಮಾಹಿತಿ ನೀಡಿ ಪತ್ರಾಂಕಿತ ಅಧಿಕಾರಿಯಾಗಿ ಬರಲು ಮನವಿ ಪತ್ರ ನೀಡಿದ್ದು, ಪಂಚರ ಸಮಕ್ಷಮ ಸಿಬ್ಬಂದಿಗಳ ಅಂಗಶೋಧನೆ ಮಾಡಿ ನಿಪಿ-10 ರಂತೆ ಮಹಜರನ್ನು 3.15 ರಿಂದ 3.20 ರವರೆಗೆ ತಯಾರಿಸಲಾಗಿದ್ದು, ಸದರಿ ಮಹಜರಿನಲ್ಲಿ ತನ್ನ ಸಹಿ ನಿಪಿ-10(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 29 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ 03.30 ಗಂಟೆಗೆ ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ಸಲಕರಣೆ, ತೂಕ ಯಂತ್ರದೊಂದಿಗೆ ಮಾಹಿತಿ ಸ್ಥಳವಾದ ಶಿವಭಾಗ್ ಕದ್ರಿಗೆ ಹೋಗಿದ್ದು, ಅಲ್ಲಿ ಮರೆಯಲ್ಲಿ ನಿಂತು ವಾಚ್ ಮಾಡುತ್ತಿದ್ದಾಗ 4.05 ಗಂಟೆಗೆ ಕಪ್ಪು ಬಣ್ಣದ ಸ್ಕೂಟರ್ ನಲ್ಲಿ ಆರೋಪಿಯಾದ ನೀವು ಬರುತ್ತಿದ್ದು, ನಿಲ್ಲಿಸಲು ಸಂಜ್ಞೆ ಮಾಡಿದಾಗ ನಿಲ್ಲಿಸದೇ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟು ಮುಂದೆ ಹೋಗಿ ನಿಯಂತ್ರಣ ತಪ್ಪಿ ಬಿದ್ದಿದ್ದು, ಅಲ್ಲಿಂದ ಎದ್ದು ಸ್ಕೂಟರ್ ನ ಕಾಲಬುಡದಲ್ಲಿದ್ದ ಚೀಲವನ್ನು ಎತ್ತಿಕೊಂಡು ಓಡಿ ಹೋಗಲು ಪ್ರಯತ್ನಿಸಿದಾಗ ಸಿಬ್ಬಂದಿಗಳು ಆರೋಪಿಯಾದ ನಿಮ್ಮನ್ನು ಹಿಡಿದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 30 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನಿಮ್ಮನ್ನು ವಿಚಾರಿಸಿದಾಗ ಆರೋಪಿಯಾದ ನೀವು ತನ್ನ ಹೆಸರು ಮೊಹಮ್ಮದ್ ಅಫ್ರೀದ್ ಎಂದು ತಿಳಿಸಿದ್ದು, ಚೀಲದಲ್ಲಿದ್ದ ವಸ್ತುವಿನ ಬಗ್ಗೆ ವಿಚಾರಿಸಿದಾಗ ಅದನ್ನು ಹೇಳಲು ತಡವರಿಸಿದ್ದು ನಂತರ ಕೂಲಂಕುಷವಾಗಿ ವಿಚಾರಿಸಿದಾಗ ಅದು ಗಾಂಜಾ ಎಂದು ತಿಳಿಸಿದ್ದು, ಅದನ್ನು ತೊಕ್ಕೊಟ್ಟುನಲ್ಲಿರುವ ಶರೀಫ್

ಅನ್ನುವವರಿಂದ ತಂದು ಮಾರಾಟ ಮಾಡುತ್ತಿದ್ದೇನೆ ಎಂದು ತಿಳಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 31 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪತ್ರಾಂಕಿತ ಅಧಿಕಾರಿಯಿಂದ ಅಂಗಶೋಧನೆ ನಡೆಸಲು ನೋಟೀಸ್ ಕೊಟ್ಟಿದ್ದು, ಅದಕ್ಕೆ ಆರೋಪಿಯಾದ ನೀವು ಒಪ್ಪಿ ಸಹಿ ಮಾಡಿದ್ದು, ತಾನು ಪತ್ರಾಂಕಿತ ಅಧಿಕಾರಿ ಎಂದು ಗುರುತಿನ ಪತ್ರ ತೋರಿಸಿ ಮನದಟ್ಟು ಮಾಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 32 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನಿಮ್ಮ ಚೀಲವನ್ನು ಪರಿಶೀಲಿಸಿದಾಗ ಪಾಲಿಥೀನ್ ಚೀಲದಲ್ಲಿ ಪ್ಲಾಸ್ಟಿಕ್ ತೊಟ್ಟೆ ಇದ್ದು ಅದರಲ್ಲಿ ಗಾಂಜಾ ಇರುವುದು ಕಂಡು ಬಂದಿದ್ದು, ಅದನ್ನು ತೂಕ ಮಾಡಿದಾಗ 2.200 ಕೆಜಿ ಇರುವುದು ಕಂಡು ಬಂದಿದ್ದು ಅದನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ E ಅಕ್ಷರದಿಂದ ಸೀಲ್ ಮಾಡಿ ಪಂಚರ ಹಾಗೂ ತನ್ನ ಸಹಿ ಇರುವ ಚೀಟಿ ಅಂಟಿಸಲಾಗಿದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 33 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನಿಮ್ಮ ಅಂಗಜಪ್ತಿ ಮಾಡಿದಾಗ ವಿವೊ ಮೊಬೈಲ್ ಸಿಕ್ಕಿದ್ದು, ಅದನ್ನು ವಶಪಡಿಸಿಕೊಂಡಿದ್ದು, ಗಾಂಜಾ ಸಾಗಾಟ ಮಾಡಲು ಬಳಸಿದ ಸ್ಕೂಟರನ್ನು ವಶಪಡಿಸಿಕೊಂಡಿದ್ದು, ಈ ಬಗ್ಗೆ ವಿವರವಾದ ನಿಪಿ–2 ಮಹಜರನ್ನು 4.15 ರಿಂದ 6.15 ರವರೆಗೆ ಮಾಡಿದ್ದು, ಸದರಿ ಮಹಜರಿನಲ್ಲಿ ತನ್ನ ಸಹಿ ನಿಪಿ–2(ಡಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 34 ಫ್ರಾಸಾ-8 ಸವಿತ್ರ ತೇಜ್ ಪಿ.ಡಿ., ವೃತ್ತ ನಿರೀಕ್ಷಕರು, ಬೈಂದೂರು ಪೊಲೀಸ್ ವೃತ್ತ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 07.09.2020 ರಂದು ಪಿಎಸ್ಐ ನೀಡಿದ ದೂರನ್ನು ಪಡೆದು ಪ್ರಕರಣ ದಾಖಲಿಸಿಕೊಂಡಿದ್ದು, ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದು, ಸದರಿ ನಿಪಿ–1 ದೂರನ್ನು ತಾನು ಸ್ವೀಕರಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–1(ಬಿ) ಯಂತೆ, ನಿಪಿ–4 ರಂತೆ ಪ್ರಥಮ ವರ್ತಮಾನ ವರದಿಯನ್ನು ತಾನು ದಾಖಲಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–1(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 35 ಅದೇ ಸಾಕ್ಷಿ ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಈ ಕುರಿತು ಡಿಸಿಪಿ ಇವರಿಗೆ ನಿಪಿ–13 ರಂತೆ ಮಾಹಿತಿ ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–13(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 36 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಾಳಿ ಸಮಯದಲ್ಲಿ ಹಾಜರಿರುವಂತೆ ಎಸಿಪಿ ಇವರಿಗೆ ಕೋರಿಕೆ ಪತ್ರ ಕಳುಹಿಸಿದ್ದು, ಎಎಸ್ಐ ಮೂಲಕ ಚಾಸಾ–2 ಮತ್ತು ಚಾಸಾ–3 ಪಂಚರನ್ನು ಠಾಣೆಗೆ ಕರೆಯಿಸಿದ್ದು, ಎಸಿಪಿ, ಪಿಎಸ್ಐ ಮತ್ತು ಠಾಣಾ ಸಿಬ್ಬಂದಿಗಳ ಅಂಗಶೋಧನೆ ಮಾಡಿ ನಿಪಿ–10 ರಂತೆ ಮಹಜರ್ ತಯಾರಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–10(ಸಿ) ಯಂತೆ, ನಿಪಿ–5 ನೋಟೀಸನ್ನು ತಾನು ಪಂಚರಿಗೆ ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–5(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 37 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಎಲ್ಲರೂ ಸೇರಿ ಶಿವಭಾಗ್ 5 ನೇ ಕ್ರಾಸ್ ಹತ್ತಿರ 3.50 ಗಂಟೆಗೆ ಹೋಗಿದ್ದು, 04.05 ಗಂಟೆಗೆ ಕೆಎ–19–ಇಝಡ್–2912 ಆರೋಪಿಯಾದ ನೀವು ಬಂದಿದ್ದು, ಆರೋಪಿಯಾದ ನಿಮ್ಮನ್ನು ಹಿಡಿಯಲು ಹೋದಾಗ, ನೀವು ಸ್ಕೂಟರ್ ನಿಂದ ಬಿದ್ದಿದ್ದು ಸ್ಕೂಟರ್ ನ ಫೂಟ್ ರೆಸ್ಟ್ ಹತ್ತಿರ ಇದ್ದ ಪ್ಯಾಕೆಟನ್ನು ತೆಗೆದು ಓಡಲು ಪ್ರಾರಂಭಿಸಿದ್ದು ಆರೋಪಿಯಾದ ನಿಮ್ಮನ್ನು ಹಿಡಿದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 38 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಯಲ್ಲಿ ಆರೋಪಿಯಾದ ನಿಮ್ಮನ್ನು ವಿಚಾರಿಸಿದಾಗ ತನ್ನ ಹೆಸರು, ವಿಳಾಸ ತಿಳಿಸಿದ್ದು ಹಾಗೂ ಪ್ಯಾಕೆಟ್ ನಲ್ಲಿ ಗಾಂಜಾ ಇರುವುದನ್ನು ತಿಳಿಸಿದ್ದು, ತಾನು ಕಲಂ 50 NDPS ಕಾಯ್ದೆಯಡಿಯಲ್ಲಿ ನಿಪಿ–14 ರಂತೆ ನೋಟೀಸ್ ನೀಡಿದ್ದು, ಪತ್ರಾಂಕಿತ ಅಧಿಕಾರಿಯಿಂದ ಅಂಗಶೋಧನೆ ಮಾಡಬೇಕೆಂದು ಆರೋಪಿಯಾದ ನೀವು ತಿಳಿಸಿದ್ದು, ಸದರಿ ನೋಟಿಸಿನಲ್ಲಿ ತನ್ನ ಸಹಿ ನಿಪಿ–14(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 39 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಎಸಿಪಿ ಜಗದೀಶ್ ಗುರುತಿನ ಪತ್ರ ತೋರಿಸಿ ತಾನು ಪತ್ರಾಂಕಿತ ಅಧಿಕಾರಿ ಎಂದು ಆರೋಪಿಯಾದ ನಿಮಗೆ ಹೇಳಿ ಅಂಗಶೋಧನೆ ಮಾಡಿದಾಗ ಕೈಯಲ್ಲಿದ್ದ ಕವರನ್ನು ಪರಿಶೀಲಿಸಿ ನೋಡಿದಾಗ ಅದರಲ್ಲಿ ಗಮ್ ಟೇಪ್ ಸುತ್ತಿದ್ದ ಲಕೋಟೆ ಇದ್ದು ಅದರಲ್ಲಿ ಬೀಜ, ಒಣಹೂವು, ಎಲೆಯಿಂದ ಕೂಡಿದ ಗಾಂಜಾ ಇದ್ದು, ಅದನ್ನು ತೂಕ ಮಾಡಿದಾಗ 2.200 ಕೆಜಿ ಇರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದನ್ನು ಬಿಳಿ ಬಟ್ಟೆಯಲ್ಲಿ ಹೊಲಿದು E ಎಂದು ಅರಗು ಸೀಲು ಹಾಕಿ ಪಂಚರ, ಎಸಿಪಿ ಮತ್ತು ನನ್ನ ಸಹಿ ಇರುವ ಚೀಟಿಯ ಅಂಟಿಸಿದ್ದು, ಸ್ವತ್ತಿಗೆ A ಎಂದು ಗುರುತು ನೀಡಿದ್ದು, ಹಳದಿ ಬಣ್ಣದ ಪ್ಲಾಸ್ಟಿಕ್ ಕವರನ್ನು, ಆರೋಪಿಯಾದ ನಿಮ್ಮ ವಶದಲ್ಲಿದ್ದ ಮೊಬೈಲನ್ನು ಮತ್ತು ಸ್ಕೂಟರನ್ನು ಸ್ವಾಧೀನ ಪಡಿಸಿಕೊಂಡಿದ್ದು, ನಿಪಿ–2 ರಂತೆ ಸ್ವತ್ತು ಸ್ವಾಧೀನತಾ ಮಹಜರನ್ನು 4.15 ರಿಂದ 6.15 ರವರೆಗೆ ತಯಾರಿಸಿದ್ದು, ಸದರಿ ಮಹಜರಿನಲ್ಲಿ ತನ್ನ ಸಹಿ ನಿಪಿ–2(ಇ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 40 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಇದಾದ ನಂತರ ಆರೋಪಿಯಾದ ನಿಮ್ಮನ್ನು ದಸ್ತಗಿರಿ ಮಾಡಿ ಠಾಣೆಗೆ ಕರೆತಂದಿದ್ದು, ವಶಪಡಿಸಿಕೊಂಡ ಸ್ವತ್ತನ್ನು ಸ್ವತ್ತು ಪಟ್ಟಿ ನಿಪಿ–15 ರಂತೆ ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–15(ಎ) ಯಂತೆ ಇರುತ್ತದೆ ಎಂದು ಗುರುತಿಸಿದ್ದು, ಸ್ಥಳದಲ್ಲಿಯೇ ನಿಪಿ–16 ರಂತೆ ದಸ್ತಗಿರಿ ಜ್ಞಾಪನ ಪತ್ರ ತಯಾರಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–16(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ41 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 08.09.2020 ರಂದು ಈ ಪ್ರಕರಣದ ಕುರಿತು ನಿಪಿ–17 ರಂತೆ ವರದಿಯನ್ನು ಮೇಲಾಧಿಕಾರಿಗೆ ಕಳುಹಿಸಿದ್ದು, ನಂತರ ಆರೋಪಿಯಾದ ನಿಮ್ಮನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 42 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ರಿಂದ ಚಾಸಾ-10, ಚಾಸಾ-13 ಇವರ ಹೇಳಿಕೆ ಪಡೆದಿದ್ದು, ಚಾಸಾ-8 ರಿಂದ ನಿಪಿ-11 ರಂತೆ 65 ಬಿ ಸರ್ಟಿಫಿಕೇಟ್ ಪಡೆದಿದ್ದು, ಅದರಲ್ಲಿ ತನ್ನ ಸಹಿ ನಿಪಿ-11(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 43 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 11.09.2020 ರಂದು ಚಾಸಾ-14 ಇವರ ಹೇಳಿಕೆ ಪಡೆದಿದ್ದು, ದಿನಾಂಕಃ 18.09.2020 ರಂದು ಅರ್ಜಿ ಸಲ್ಲಿಸಿದ್ದು, ದಿನಾಂಕಃ 23.10.2020 ರಂದು ನ್ಯಾಯಾಲಯದಿಂದ ಆದೇಶ ಪಡೆದು ದಿನಾಂಕಃ 07.11.2020 ರಂದು ಸ್ವಾಧೀನಪಡಿಸಿಕೊಳ್ಳಲಾದ ವಸ್ತುವಿನಿಂದ ಇನ್ವೆಂಟರಿ ಮೂಲಕ ಸ್ಯಾಂಪಲ್ ಪಡೆದುಕೊಂಡಿದ್ದು, ಆ ಸಮಯದಲ್ಲಿ ಚಾಸಾ-8 ಇವರು ಛಾಯಾ ಚಿತ್ರ ತೆಗೆದಿದ್ದು, ಈ ಕುರಿತು ನ್ಯಾಯಾಧೀಶರಿಂದ ಇನ್ವೆಂಟರಿ ಸರ್ಟಿಫಿಕೇಟ್ ಪಡೆದಿದ್ದು, ಅದನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದ ಸರ್ಟಿಫಿಕೇಟ್‌ನೊಂದಿಗೆ ನಿಪಿ-18 ಎಂದು ಗುರುತಿಸಿದ್ದು, ನ್ಯಾಯಾಧೀಶರ ಮುಂದೆ ತೆಗೆದಿರುವ ಫೋಟೋಗಳನ್ನು ನಿಪಿ-19 ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 44 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 13.11.2020 ರಂದು ಸ್ಯಾಂಪಲ್ ಗಾಂಜಾವನ್ನು ಪರೀಕ್ಷೆಗಾಗಿ FSL ಗೆ ಕಳುಹಿಸಿದ್ದು, ದಿನಾಂಕಃ15.11.2020 ರಂದು ಚಾಸಾ-12 ಇವರ ಹೇಳಿಕೆ ಪಡೆದಿದ್ದು, ದಿನಾಂಕಃ12.08.2021 ರಂದು ನಿಪಿ-7 ರಂತೆ FSL ವರದಿ ಪಡೆದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು

ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 45 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 07.09.2020 ರ ಠಾಣಾ ಜನರಲ್ ಡೈರಿಯ ಪ್ರತಿಯನ್ನು ನಿಪಿ–20 ರಂತೆ ತಯಾರಿಸಿದ್ದು, ನಂತರ 13.09.2021 ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 46 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 10.01.2022 ರಂದು ನ್ಯಾಯಾಲಯದ ಆದೇಶದಂತೆ ಸ್ಕೂಟರನ್ನು ಮಹಜರ್ ಮೂಲಕ ಬಿಡುಗಡೆ ಮಾಡಿದ್ದು, ಸದರಿ ಮಹಜರ್ ಮತ್ತು ರಸೀದಿಯನ್ನು ನಿಪಿ–21 ಮತ್ತು ನಿಪಿ–22 ಎಂದು ಗುರುತಿಸಿದ್ದು ಮೊಬೈಲ್, ಪಾಲಿಥೀನ್ ಬ್ಯಾಗ್, ಗಾಂಜಾ (ಮುಮಾ–1 ರಿಂದ 3) ತಾನು ವಶಪಡಿಸಿಕೊಂಡಿದ್ದು, ನಿಪಿ–3 ಫೋಟೋದಲ್ಲಿ ಕಾಣುವ ವಾಹನವನ್ನು ತಾನು ಬಿಡುಗಡೆ ಮಾಡಿದ್ದು, ಆರೋಪಿಯಾದ ನಿಮ್ಮನ್ನು ತಾನು ದಸ್ತಗಿರಿ ಮಾಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 47 ಫ್ರಾಸಾ-9 ಸಂದೀಪ್ ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ07.09.2020 ರಂದು ತನ್ನನ್ನು ಪೋಲೀಸರು ಕದ್ರಿ ಪೋಲೀಸು ಠಾಣೆಗೆ ಕರೆಸಿದ್ದು, ಕದ್ರಿ ಶಿವಭಾಗಕ್ಕೆ ಮಹಜರಿಗೆಂದು ಕರೆದುಕೊಂಡು ಹೋಗಿದ್ದು, ಪಂಪ್ ವೆಲ್ ಕಡೆಯಿಂದ ಬಂದ ಸ್ಕೂಟರನ್ನು ಚೇಸ್ ಮಾಡಿ ಕದ್ರಿ ಶಿವಭಾಗದಲ್ಲಿ ನಿಲ್ಲಿಸಿದ್ದು, ಗಾಡಿಯ ಡಿಕ್ಕಿಯಲ್ಲಿದ್ದ ಗಾಂಜಾವನ್ನು ತೋರಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 48 ನಿಮ್ಮ ಪರವಾಗಿ ಯಾರಾದರೂ ಸಾಕ್ಷಿ ಇದ್ದಾರೆಯೇ?

ಉತ್ತರಃ ಇಲ್ಲ

ಪ್ರ.ನಂಃ 49 ಈ ಕೇಸಿನ ಬಗ್ಗೆ ನೀವು ಏನಾದರೂ ಹೇಳುವುದು ಇದೆಯೇ?

ಉತ್ತರಃ ಇಲ್ಲ

(ಮೇಲ್ಕಂಡ ಹೇಳಿಕೆಯನ್ನು ನಾನು ಖುದ್ದಾಗಿ ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ಕೊಟ್ಟ ಹೇಳಿಕೆಯನ್ನು ನಾನೇ ಸ್ವತಃ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

BASAVARAJ Digitally signed by BASAVARAJ Date: 2025.09.04 17:10:20 +0530

**(ಬಸವರಾಜ)**

ಸ್ಥಳಃ ಮಂಗಳೂರು **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

ದಿನಾಂಕ :19/08/2025 **ದ.ಕ., ಮಂಗಳೂರು.**

ಆರೋಪಿಯ ಸಹಿಃ